ಶ್ರೀ ಸುಭಾಷ್ ಗುತ್ತೇದಾರ: ಮುಂದೆ ಬರಗಾಲ ಇದೆ ಹೇಳುತ್ತಿದ್ದೇನೆ.

ಅಧ್ಯಕ್ಷರು: ಬರಗಾಲ ಇದ್ದವರಿಗೆ ಪರಿಹಾರ, ನೆರೆಹಾವಳಿಯಿದ್ದಲ್ಲಿ ಪರಿಹಾರದ ಬಗ್ಗೆ ಉತ್ತರ ಹೇಳಿ.

ಶ್ರೀ ರಮೇಶ್ ಸಿ. ಜಿಗಜಿಗಣಗಿ: ಅಧ್ಯಕ್ಷರೆ, ಇದರ ಬಗ್ಗೆಯೂ ಕೂಡ ನಾನು ಪರದಿಯನ್ನು ತರಿಸಿಕೊಂಡು ನಾಳೆ ಹೇಳುತ್ತೇನೆ ಎಂದು ಹೇಳಿದ್ದೆ. ನಾಳೆ ಬೇರೆ ಜಿಲ್ಲೆಯ ಬಗ್ಗೆ ಹೇಳುವಾಗ ಅಳಂದ ಬಗ್ಗೆಯೂ ಸ್ಟೇಟ್‌ಮೆಂಟ್ ಮಾಡುತ್ತೇನೆ.

(ಊ) ಗುಲ್ಬರ್ಗಾ ಜಿಲ್ಲೆಯಲ್ಲಿ ಮಳೆಯಿಲ್ಲದೆ ತೊಂದರೆಯಾಗಿರುವುದರಿಂದ ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವುದು

+ **ಶ್ರೀ ರೇವುನಾಯಕ್ ಬೆಳಮಾಗಿ (ಕಮಲಾಪುರ):** ನನ್ನ ಕ್ಷೇತ್ರವಾದ ಗುಲ್ಬರ್ಗ ಜಿಲ್ಲೆ ನನ್ನ ಕ್ಷೇತ್ರ ನೆನಪಿಗೆ ಬಂದಾಗ ನನಗೆ ಬಹಳ ಭಯವಾಗುತ್ತದೆ. ಏಕೆಂದರೆ ಅಲ್ಲಿ ಮಳೆ ಇಲ್ಲ, ಬೆಳೆ ಇಲ್ಲ, ರೈತರು ಬೀಜ ಬಿತ್ತಿದರು, ಸಾಲ ತೆಗೆದುಕೊಂಡು ಗೊಬ್ಬರವನ್ನು ಹಾಕಿದರೂ ಉಳಿದಿಲ್ಲ. ರೈತರು ಭಯಭೀತರಾಗಿದ್ದಾರೆ. ಕೂಲಿ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಈ ಜಿಲ್ಲೆಯನ್ನು ಬರಗಾಲಪೀಡಿತ ಪ್ರದೇಶ ಎಂದು ಘೋಷಿಸಬೇಕೆಂದು ನಮ್ಮ ಜಿಲ್ಲಾ ಪಂಚಾಯಿತಿಯವರು ಸಜೆಷನ್ ಕೂಡ ಮಾಡಿದ್ದಾರೆ. ಅದರ ಜೊತೆಗೆ ತಹಶೀಲ್ದಾರ್‌ರವರು ಎ.ಸಿ.ರವರು ಸ್ವತಃ ಜೊತೆಯಲ್ಲಿ ಬಂದು ಕಣ್ಣಾರೆ ಅಲ್ಲಿನ ಪರಿಸ್ಥಿತಿಯನ್ನು ನೋಡಿದ್ದಾರೆ. ಅವರು ಇದರ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಕಳುಹಿಸುತ್ತೇವೆಂದು ಹೇಳಿದ್ದಾರೆ. ಡಿ.ಸಿ.ಯವರನ್ನು ಭೇಟಿ ಆಗಿಲ್ಲ. ಆದರೆ ಮಾನ್ಯ ಸಚಿವರನ್ನು ನಾನು ಖುದ್ದಾಗಿ ಭೇಟಿ ಆಗಿ ಹೇಳಿದ್ದೇನೆ. ನನ್ನ ಕ್ಷೇತ್ರವಾದ ಅಳಂದ ತಾಲ್ಲೂಕಿನ ಬಗ್ಗೆ ಗುಲ್ಬರ್ಗಾ ತಾಲ್ಲೂಕಿನ ಬಗ್ಗೆ ಹೇಳಿದ್ದೇನೆ. ಇಷ್ಟೆಲ್ಲಾ ಪ್ರವಾಸ ಮಾಡಿದ್ದೇನೆ. ಯಾವ ಕಡೆಯೂ ಮಳೆ ಇಲ್ಲ, ಯಾವ ಕಡೆಯೂ ಬೆಳೆ ಇಲ್ಲ. ಜಾನುವಾರುಗಳಿಗೆ ಮೇವು ಇಲ್ಲ. ಕುಡಿಯಲೂ ನೀರು ಇಲ್ಲ. ಬಹಳ ಸಮಸ್ಯೆಯಾಗಿದೆ ಎಂದು ನಾನು ಖುದ್ದಾಗಿ ಭೇಟಿ ಮಾಡಿ ಹೇಳಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ನೀವೇ ನಮಗೆ ರಕ್ಷಣೆ ಕೊಡಬೇಕು. ನಾವು ಹೊಸದಾಗಿ ಎಂಎಲ್‌ಎ ಆಗಿದ್ದೇವೆ. ನಾವು ಮಾತನಾಡಲು ಅವಕಾಶ ಕೊಡುತ್ತೀರಿ. ಅದರ ಜೊತೆಯಲ್ಲಿ ಕೆಲಸ ಮಾಡಿಕೊಡುತ್ತೀರೆಂದು ನಾನು ನಂಬಿದ್ದೇನೆ. ಗುಲ್ಬರ್ಗ ಜಿಲ್ಲೆಯಲ್ಲಿ ಅಳಂದ ತಾಲ್ಲೂಕ್ ಮತ್ತು ಗುಲ್ಬರ್ಗ ತಾಲ್ಲೂಕು ಎರಡನ್ನೂ ಬರಗಾಲ ಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕು. ಅಲ್ಲಿ ಕಾಮಗಾರಿಗಳು ನಡೆಯಬೇಕು. ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಮಾಡಬೇಕು. ಜಾನುವಾರುಗಳಿಗೆ ಮೇವು, ಸಿಗಬೇಕು ಎಂದು ನಾನು ನಿಮ್ಮ ಮೂಲಕ ಅವರನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ: ಬರಿ ಕೆಲಸ ನಡೆಸಿದರೆ ಕೂಲಿಕಾರರಿಗೆ ಆಯಿತು.

ನಿನ್ನೆಯೂ ಕೂಡ ನನ್ನ ಜೊತೆ ಚರ್ಚೆ ಮಾಡಿದ್ದಾರೆ. ನಾನು ಕೂಡ ಅವರಿಗೆ ಹೇಳಿದ್ದೇನೆ. ನಿಮ್ಮ ಕ್ಷೇತ್ರದಲ್ಲಿ ಯಾವ ಯಾವ ಕೆಲಸ ಯಾವಯಾವ ಭಾಗದಲ್ಲಿ ತೆಗೆದುಕೊಳ್ಳಬೇಕು, ಅದರ ಬಗ್ಗೆ ಒಂದು ಪಟ್ಟಿಯನ್ನು ಕೊಡಿ ನಾನು ಡಿ.ಸಿ.ಯವರಿಗೋ, ಜಿಲ್ಲಾ ಪಂಚಾಯಿತಿಯವರಿಗೋ ಹೇಳಿ ಅಲ್ಲಿ ಕೆಲಸ ಪ್ರಾರಂಭ ಮಾಡಿಸಿಕೊಡುತ್ತೇನೆಂದು ಹೇಳಿದ್ದೆ. ಅವರು ಕೊಡಲಿ, ಯಾವಯಾವ ಕಡೆ ಕೆಲಸ ಬೇಕು ಎಂದು. ನಾನು ಪ್ರಾರಂಭ ಮಾಡಿಸುತ್ತೇನೆ.

(ಋ) ದ.ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಆಟೋರಿಕ್ಷಾ ಪರವಾನಗಿ ನೀಡದಿರುವ ಬಗ್ಗೆ.

+ ಶ್ರೀ ವಿ.ಸದಾನಂದ ಗೌಡ (ಪುತ್ತೂರು): ಮಾನ್ಯ ಸಭಾಧ್ಯಕ್ಷರೆ, ಈ ರಾಜ್ಯದಲ್ಲಿ ನಿರುದ್ಯೋಗ ನಿವಾರಣೆ ಮಾಡಬೇಕು. ಯುವಜನರಿಗೆ ಸ್ವಂತ ಕಾಲಿನಲ್ಲಿ ನಿಲ್ಲುವಂತೆ ಯೋಜನೆಯನ್ನು ರಾಜ್ಯ ಸರ್ಕಾರದವರು ಒಂದು ಕಡೆ ಮಾಡುತ್ತಾ ಇದ್ದರೆ, ಇನ್ನೊಂದು ಕಡೆ ಇದೇ ಒಂದು ಅಧಿಕಾರಿವರ್ಗ ಈ ನಿರುದ್ಯೋಗ ಯುವಕರನ್ನು ಸ್ವಂತ ಕಾಲಿನಲ್ಲಿ ನಿಲ್ಲದಂತೆ ಮಾಡುತ್ತಿದ್ದಾರೆ. ಇಂತಹ ಒಂದು ಉದಾಹರಣೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ನಮ್ಮ ಜಿಲ್ಲಾಧಿಕಾರಿಯವರ ಒಂದು ಆದೇಶದಲ್ಲಿ ನಡೆದಿದೆ. ಇವತ್ತು ಪ್ರಧಾನಮಂತ್ರಿಗಳ ರೋಜ್‌ಗಾರ್ ಯೋಜನೆ ಅಥವಾ ಇತರ ಹಲವಾರು ಯೋಜನೆಗಳಿಂದ ಸಾಲವನ್ನು ಪಡೆದುಕೊಂಡು ನಿರುದ್ಯೋಗಿ ಯುವಕರಿಗೆ ಆಟೋರಿಕ್ಷಾ ಮುಖಾಂತರ ತಮ್ಮ ಜೀವನ ನಿರ್ವಹಣೆ ಮಾಡುವಂತಹ ಒಂದು ವ್ಯವಸ್ಥೆ ಇದೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು ಒಂದು ಆದೇಶವನ್ನು ಹೊರಡಿಸಿ ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಯಾವುದೇ ತಾಲ್ಲೂಕು ಕೇಂದ್ರಕ್ಕೆ ಬರುವಂತಹ ಆಟೋರಿಕ್ಷಾಗಳಿಗೆ ತಾಲ್ಲೂಕು ಕೇಂದ್ರದಿಂದ 3 ಕಿ.ಮೀ. ನಗರ ಕೇಂದ್ರಕ್ಕೆ 5 ಕಿ.ಮೀ. ಒಳಗಡೆ ಬರುವಂಥ ಯಾವುದೇ ಆಟೋರಿಕ್ಷಾಗಳಿಗೆ ಪರವಾನಗಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಇದು ಎಂಥ ಒಂದು ವಿಪರ್ಯಾಸ! ಇವತ್ತು ಗ್ರಾಮಾಂತರ ಪ್ರದೇಶಗಳಿಂದ ಸಾಮಾನ್ಯ ಮನುಷ್ಯ ತಾಲ್ಲೂಕು ಕೇಂದ್ರಕ್ಕೆ ಬರಬೇಕಾದರೆ ಸಾರಿಗೆ ಸಂಪರ್ಕ ವ್ಯವಸ್ಥೆ ಸರಿಯಿಲ್ಲ ಎಂಬುದು ಎಲ್ಲಾ ನಮಗೆ ಗೊತ್ತಿರುವ ಸಂಗತಿಗಳು ಪ್ರೈವೇಟ್ ವೆಹಿಕಲ್‌ಗಳಿಗೆ ಇವತ್ತು ಪರವಾನಗಿ ಕೊಡುತ್ತಾ ಇಲ್ಲದಿರುವುದು ನಮಗೆ ಗೊತ್ತಿದೆ. ಈ ಹಿನ್ನೆಯಲ್ಲಿ ಜಿಲ್ಲಾಧಿಕಾರಿಗಳು ಒಂದು ಆದೇಶವನ್ನು ಹೊರಡಿಸಿದ್ದಾರೆ. ಆ ಆದೇಶದ ಸಂಖ್ಯೆ; ಆರ್‌ಟಿಎ: ಸಿಆರ್: 134:97-98:ಇ-4 ಎಂದು ಹೇಳಿ 1-4-97ಕ್ಕೆ ಆದೇಶ ಹೊರಡಿಸಿ ದಕ್ಷಿಣಕನ್ನಡ ಜಿಲ್ಲೆ ಮಂಗಳೂರು, ಉಡುಪಿ ನಗರಸಭೆ ವ್ಯಾಪ್ತಿಯಲ್ಲಿ 5 ಕಿ.ಮೀ. ವ್ಯಾಪ್ತಿಯಲ್ಲಿ ಬರುವಂತಹ ಯಾವುದೇ ಆಟೋರಿಕ್ಷಾಗಳಿಗೆ ಪರವಾನಗಿ ಇಲ್ಲ. ಬಾಕಿ ಎಲ್ಲಾ ಪ್ರದೇಶಗಳಿಗೆ ಅಂದರೆ ಸುಳ್ಯ, ಪುತ್ತೂರು, ಬೆಳ್ತಂಗಡಿ, ಕಾರ್ಕಳ ಎಲ್ಲಾ ಕಡೆಗಳಲ್ಲಿ 3 ಕಿ.ಮೀಯಿಂದ ಹೊರಗಡೆ ಮಾತ್ರ ಆಟೋರಿಕ್ಷಾಕ್ಕೆ ಪರವಾನಗಿಯನ್ನು ಕೊಟ್ಟಿದ್ದಾರೆ. ನಮ್ಮಲ್ಲಿ ಏನು ಮಾಡುತ್ತಾರೆಂದರೆ ಬೆಳಿಗ್ಗೆ ಎದ್ದು ಜನ ಆಟೋರಿಕ್ಷಾ ಮುಖಾಂತರವೇ ತಾಲ್ಲೂಕು ಕೇಂದ್ರಕ್ಕೆ ಬರುವಂತಹ ವ್ಯವಸ್ಥೆ ಆಗಿದೆ.